# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)
## ರಾಜ್ಯಸಮಿತಿ, ಕರ್ನಾಟಕ

ಮಾನ್ಯ ಸಂಪಾದಕರೆ, ಮಾಧ್ಯಮ ಪ್ರತಿನಿಧಿಗಳೆ,
ಶುಭಾಶಯಗಳು.

ಕಳೆದ ಲೋಕಸಭಾ ಚುನಾವಣಾ ಸಂದರ್ಭ ಹಾಗೂ ನಂತರದಲ್ಲಿ ರಾಜ್ಯ ಸರ್ಕಾರ ಹಾಗೂ ಪೋಲಿಸ್ ಪಡೆಗಳು ನಡೆಸುತ್ತಿರುವ ಜನವಿರೋಧಿ, ಪ್ರಜಾತಂತ್ರ ವಿರೋಧಿ ಕೃತ್ಯಗಳ ಬಗೆಗಿನ ನಮ್ಮ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡುತ್ತಿದ್ದೇವೆ. ತಾವುಗಳು ಇದನ್ನು ಪರಿಗಣಿಸಿ ಪ್ರಕಟಿಸಬೇಕೆಂದು ಈ ಮೂಲಕ ಕೋರುತ್ತಿದ್ದೇವೆ.

ಹೋರಾಟದಲ್ಲಿ ತಮ್ಮೊಂದಿಗೆ,

ಗಂಗಾಧರ್
ರಾಜ್ಯ ಸಮಿತಿ (ಪರವಾಗಿ)
ಸಿಪಿಐ (ಮಾವೋವಾದಿ)
ಕರ್ನಾಟಕ

2/05/2009

---

ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಭದ್ರತೆ ಹಾಗೂ ಶಾಂತಿಯುತ ಚುನಾವಣೆಯನ್ನು ಖಾತ್ರಿಗೊಳಿಸುವ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಮತ್ತು ಪೋಲಿಸರು ವ್ಯಾಪಕವಾದ ಭಯೋತ್ಪಾದನೆ ಹಾಗೂ ಅಕ್ರಮಗಳನ್ನು ನಡೆಸಿದ್ದಾರೆ. ನಮ್ಮ ಪಕ್ಷ ಈ ಕಪಟ ಚುನಾವಣೆಯನ್ನು ಬಹಿಷ್ಕರಿಸಲು ಜನರ ಮಧ್ಯೆ ಪ್ರಚಾರ ಮಾಡಿತ್ತು. ಆದರೆ, ಕೆಲವು ಮಾಧ್ಯಮಗಳಲ್ಲಿ ಬಿಂಬಿಸಿರುವಂತೆ ಜನರಿಗೆ ಯಾವುದೇ ರೀತಿಯ ಬೆದರಿಕೆಯನ್ನು ಹಾಕಿರಲಿಲ್ಲ. ಅದನ್ನು ನಾವು ಮಾಡುವುದಿಲ್ಲ. ಚುನಾವಣೆ, ರಾಜಕೀಯ ಪಕ್ಷಗಳು, ಅಭ್ಯರ್ಥಿಗಳ ಕಪಟತೆ, ಜನವಿರೋಧಿತನ ಹಾಗೂ ಪ್ರಜಾತಂತ್ರ ವಿರೋಧಿತನಗಳನ್ನು ಜನರಿಗೆ ಮನವರಿಕೆ ಮಾಡುತ್ತಾ ನವ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಸ್ಥಾಪನೆಗೆ ಜನರು ನೇರವಾಗಿ ಹೋರಾಟಕ್ಕಿಳಿಯುವಂತೆ ಪ್ರೇರೇಪಿಸುವುದು ನಮ್ಮ ಉದ್ದೇಶವಾಗಿದೆ. ಚುನಾವಣಾ ಬಹಿಷ್ಕಾರದ ಕರೆ ನಮ್ಮ ಒಂದು ರಾಜಕೀಯ ಘೋಷಣೆಯಾಗಿದೆ. ಕೊಳೆತು ನಾರುತ್ತಿರುವ ಈ ವ್ಯವಸ್ಥೆ, ಅದರಿಂದ ಹೆಚ್ಚಾಗುತ್ತಿರುವ ಜನರ ಬವಣೆಗಳು ದಿನೇದಿನೇ ಕಡಿತವಾಗುತ್ತಿರುವ ಜನರ ಬದುಕುವ ಅವಕಾಶಗಳು, ಹೆಚ್ಚುತ್ತಿರುವ ಜನರ ಮೇಲಿನ ಶೋಷಣೆ ದೌರ್ಜನ್ಯಗಳನ್ನು ಕೊನೆಗಾಣಿಸಿ ಸಮಸಮಾಜವನ್ನು ಸ್ಥಾಪಿಸಲು ಜನರೇ ಜವಾಬ್ದಾರಿ ತೆಗೆದುಕೊಳ್ಳಲು ಮುಂದೆ ಬರಬೇಕೆಂಬ ಅರಿವು ಮೂಡಿಸುವುದು ಚುನಾವಣಾ ಬಹಿಷ್ಕಾರ ಕರೆಯ ಉದ್ದೇಶವಾಗಿದೆ. ಚುನಾವಣಾ ಬಹಿಷ್ಕಾರ ಎಂದರೆ ಶೇ 10ಕ್ಕಿಂತಲೂ ಕಡಿಮೆ ಇರುವ ಆಳುವ ವರ್ಗಗಳ ನಿರಂಕುಶಾಧಿಕಾರವನ್ನು ತಿರಸ್ಕರಿಸುವುದು ಎಂದರ್ಥ. ಈ ಕಪಟ ಚುನಾವಣೆಯನ್ನು ಒಪ್ಪಿಕೊಂಡರೆ ಅದು ಆಳುವ ವರ್ಗಗಳನ್ನು ಮತ್ತವರ ನಿರಂಕುಶಾಧಿಕಾರವನ್ನು, ಅವರು ನಡೆಸುತ್ತಿರುವ ಶೋಷಣೆ ದೌರ್ಜನ್ಯ ಅತ್ಯಾಚಾರಗಳನ್ನು ಒಪ್ಪಿಕೊಳ್ಳುವುದು ಎಂಬುದೇ ಆಗುತ್ತದೆ. ಅಲ್ಲದೆ ಈ ಚುನಾವಣೆಗಳು ಯಾವುವೂ ಜನಪರವಾಗಿ ನ್ಯಾಯಸಮ್ಮತವಾಗಿ ನಡೆಯುವುದಿಲ್ಲ. ಬೆದರಿಕೆ, ಹಣ,

ಹೆಂಡ, ಕೊಡುಗೆ ಮೊದಲಾದ ಆಮಿಷಗಳು ಗೂಂಡಾಗಿರಿಗಳು ಅಲ್ಲದೆ ಪೋಲಿಸ್ ಹಾಗೂ ಅರೆ ಸೇನಾಪಡೆಗಳ ಭಯೋತ್ಪಾದನೆಗಳಡಿ ನಡೆಯುತ್ತವೆ.

ಒಂದು ವೇಳೆ ಇದು ನಿಜವಾದ ಪ್ರಜಾಪ್ರಭುತ್ವ ಹಾಗೂ ನಿಜವಾದ ಚುನಾವಣೆ ಎಂದಾದಲ್ಲಿ ಜನರು ತಮ್ಮ ನಿಲುವುಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು, ಭ್ರಷ್ಟ, ಲೂಟಿಕೋರ ಗೂಂಡಾ ಅಭ್ಯರ್ಥಿಗಳನ್ನು ತಿರಸ್ಕರಿಸಲು, ಜನವಿರೋಧಿ ರಾಜಕೀಯ ಪಕ್ಷಗಳನ್ನು ತಿರಸ್ಕರಿಸಿ ಪ್ರಚಾರ ಮಾಡುವ, ತಮಗೆ ಸರಿಯೆನಿಸಿದ ವ್ಯವಸ್ಥೆಯನ್ನು ಆಯ್ದುಕೊಳ್ಳುವ ಅದಕ್ಕಾಗಿ ಸಂಘಟಿತರಾಗುವ ಅವಕಾಶ ಮುಕ್ತವಾಗಿರಬೇಕಲ್ಲವೆ? ಮಲೆನಾಡು ಕರಾವಳಿಗಳಲ್ಲಿ ನಾವು ಚುನಾವಣೆಗಳನ್ನು ಬಹಿಷ್ಕರಿಸಿ ಪ್ರಚಾರ ಮಾಡುವುದೇ ದೊಡ್ಡ ದ್ರೋಹ ಇಲ್ಲವೆ ಭಯೋತ್ಪಾದನೆ ಎಂಬಂತೆ ಬಿಂಬಿಸಿ ಜನರು ಎಲ್ಲಿ ಚುನಾವಣೆ ಬಹಿಷ್ಕರಿಸಿ ಪರ್ಯಾಯ ವ್ಯವಸ್ಥೆಯತ್ತ ಹೊರಳಿ ಬಿಡುತ್ತಾರೋ ಎಂಬ ಭಯದಿಂದ ಪೋಲಿಸ್ ಪಡೆಗಳನ್ನು ಭಾರಿ ಶಸ್ತ್ರಾಸ್ತ್ರಗಳೊಂದಿಗೆ ಮನೆಮನೆಗೆ ಕಳುಹಿಸಿ ಬೆದರಿಸಿ ಮತ ಹಾಕಬೇಕೆಂದು ತಾಕೀತು ಮಾಡುವ ಅಗತ್ಯವೇನು? ಒಂದುವೇಳೆ ಮತ ಹಾಕದಿದ್ದರೆ ನಿಮ್ಮನ್ನೆಲ್ಲಾ ನಕ್ಸಲೀಯರೆಂದು ಪರಿಗಣಿಸಿ ಗುಂಡಿಟ್ಟು ಸಾಯಿಸುವುದಾಗಿ ಭಯೋತ್ಪಾದನೆ ಮಾಡುವ ಅಗತ್ಯ ಏನಿದೆ? ಮಲೆನಾಡು ಕರಾವಳಿಗಳಲ್ಲಿ ಅಮಾಯಕ ಜನರನ್ನು ಅಕ್ರಮವಾಗಿ ಬಂಧಿಸಿಡುವುದರ ಔಚಿತ್ಯವೇನಿದೆ? ಈ ಕೃತ್ಯಗಳು ಈ ಚುನಾವಣೆಗಳು ಎಷ್ಟು ಕಪಟ, ಆಳುವ ವರ್ಗಗಳು ಜನರನ್ನು ಪ್ರಜಾಪ್ರಭುತ್ವದ ಬಗ್ಗೆ ನಂಬಿಸಲು ನಡೆಸುವ ಪೊಳ್ಳು ನಾಟಕಗಳು, ಈ ಶೋಷಕ ವ್ಯವಸ್ಥೆಯನ್ನು ಕಾಪಾಡುವ ಕುತಂತ್ರ ಎಂಬುದು ಸರಳವಾಗಿ ಅರ್ಥವಾಗುತ್ತದೆ. ಈ ಸರಳ ಸತ್ಯವನ್ನು ಅರ್ಥಮಾಡಿಕೊಂಡು ಸ್ಪಷ್ಟ ನಿಲುವು ತೆಗೆದುಕೊಳ್ಳಲಾರದವರು ಪ್ರಜಾತಂತ್ರವಾದಿಗಳಾಗಲು ಸಾಧ್ಯವೆ?

ಮಲೆನಾಡು ಕರಾವಳಿಗಳಲ್ಲಿ ಚುನಾವಣಾ ಪೂರ್ವದಿಂದ ಪ್ರಾರಂಭವಾದ ಅಕ್ರಮ ಬಂಧನ, ಸುಳ್ಳು ಕೇಸುಗಳು ಚುನಾವಣೆಯ ನಂತರವೂ ಮುಂದುವರಿದಿವೆ. ಭಾರಿ ಶಸ್ತ್ರಾಸ್ತ್ರಗಳೊಂದಿಗೆ ಬಡ ಹಳ್ಳಿಗಳಿಗೆ ಹಿಂಡುಗಟ್ಟಲೆ ನುಗ್ಗಿ ಸಿಕ್ಕಸಿಕ್ಕವರನ್ನೆಲ್ಲಾ ಬೆದರಿಸುವುದು, ಬಂಧಿಸುವುದು ಮಾಡುತ್ತಾ ಭಯೋತ್ಪಾದನೆ ಮಾಡುತ್ತಿದ್ದಾರೆ. ಹಲವಾರು ಯುವಕರನ್ನು ಹಿಡಿದು ಅಕ್ರಮ ಬಂಧನದಲ್ಲಿರಿಸಲಾಗಿದೆ. ಅಮಾಯಕರ ಮೇಲೆ ಖಾಕಿ ದೌರ್ಜನ್ಯ, ಭಯೋತ್ಪಾದನೆ ಮಾಡುವ ಮೂಲಕ ಹೊಸದಾಗಿ ಅಧಿಕಾರ ವಹಿಸಿಕೊಂಡಿರುವ ಪಶ್ಚಿಮ ವಲಯದ ಐ.ಜಿ. ಗೋಪಾಲ್ ಹೊಸೂರ್ ತಮ್ಮ ದಕ್ಷತೆಯನ್ನು!? ತೋರಿಸುತ್ತಾ ಸರ್ಕಾರದಿಂದ ಭೇಷ್ ಎನಿಸಿಕೊಳ್ಳಲು ತವಕಿಸುತ್ತಿದ್ದಾರೆ. ಇದೇ ಸಮಯದಲ್ಲಿ ಚುನಾವಣೆಗಾಗಿ ಬಂದ ಆಂಧ್ರದ ಖಾಕಿ ಗೂಂಡಾಗಳು ಧರ್ಮಸ್ಥಳದಲ್ಲಿ ದಾಂಧಲೆ ನಡೆಸಿ ಹತ್ತಾರು ಗುಂಡು ಹಾರಿಸಿ ಒಬ್ಬ ಅಮಾಯಕ ದಲಿತನನ್ನು ಕೊಂದು ಹಲವಾರು ಜನರಿಗೆ ಗಂಭೀರ ಗಾಯಗಳನ್ನುಂಟು ಮಾಡಿ ಪೋಲಿಸ್ ಪಡೆಗಳ ನಿಜ ಸ್ವರೂಪವನ್ನು ತೋರಿಸಿಕೊಟ್ಟಿದ್ದಾರೆ. ಮಹಾನ್ ಪ್ರಜಾಪ್ರಭುತ್ವವಲ್ಲ ಮಹಾನ್ ಬಂದೂಕಿನ ರಾಜ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಈಗ ಆಂಧ್ರ ಪೋಲಿಸರು ನಡೆಸಿದ ಕಗ್ಗೊಲೆ ಮತ್ತು ದುಷ್ಕೃತ್ಯಗಳನ್ನು ಪ್ರತಿಭಟಿಸಿದ ಜನರ ಮೇಲೆ ಸುಳ್ಳು ಕೇಸು ಹಾಕಿ 250ಕ್ಕೂ ಹೆಚ್ಚು ಜನರನ್ನು ಬಂಧಿಸುತ್ತಿದ್ದಾರೆ.

ಮಲೆನಾಡು ಕರಾವಳಿಗಳಲ್ಲಿ ಪೋಲಿಸರು ನಡೆಸುತ್ತಿರುವ ಭಯೋತ್ಪಾದನೆ ಹಾಗೂ ಅಕ್ರಮ ಬಂಧನಗಳನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಕೂಡಲೇ ಅಕ್ರಮ ಬಂಧನದಲ್ಲಿರುವವರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂದು ನಾವು ಸರ್ಕಾರವನ್ನು ಆಗ್ರಹಿಸುತ್ತಿದ್ದೇವೆ. ಕೊಲೆ, ಅಕ್ರಮ, ಲೂಟಿಗಳಲ್ಲಿ ತೊಡಗಿರುವ ಪೋಲಿಸ್ ಪಡೆಗಳನ್ನು ವಿಸರ್ಜಿಸಬೇಕೆಂದು ಒತ್ತಾಯಿಸುತ್ತಿದ್ದೇವೆ.

ನಾಡಿನ ಜನಪರರು, ಪ್ರಜಾತಂತ್ರವಾದಿಗಳು ಸರ್ಕಾರ ಮತ್ತದರ ಖಾಕಿ ಪಡೆಗಳು ನಡೆಸುತ್ತಿರುವ ಭಯೋತ್ಪಾದನೆಯನ್ನು ಖಂಡಿಸಿ ಹೋರಾಡಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

ಶುಭಾಶಯಗಳೊಂದಿಗೆ,

ಗಂಗಾಧರ್
ರಾಜ್ಯಸಮಿತಿ ಪರವಾಗಿ
2/5/2009 ಸಿಪಿಐ (ಮಾವೋವಾದಿ)
ಕರ್ನಾಟಕ